ನಾಲೆಗಳ ಆಧುನೀಕರಣ

2030 (2360); ಶ್ರೀ ಚಲುವರಾಯಸ್ವಾಮಿ ಎನ್.

ಅ) 2014–15ನೇ ಸಾಲಿನ ಅಯವ್ಯಯದಲ್ಲಿ ಘೋಷಿಸಿದಂತೆ, ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯ ನಾಲಾ ಜಾಲದ ಎರಡನೇ ಹಂತದ ಅಭಿವೃದ್ಧಿ, ಹೇಮಾವತಿ ಜಲಾಶಯದ ಎಚ್.ಆರ್.ಬಿ.ಸಿ ಮತ್ತು ಎಚ್.ಆರ್.ಎಚ್.ಎಲ್.ಸಿ ನಾಲೆಗಳು ಮತ್ತು ಬಂಗಾರದೊಟ್ಟಿ ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದಿಯೇ; ಇದಕ್ಕೆ ಒದಗಿಸಿರುವ ಅನುದಾನ ಎಷ್ಟು; ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಕಾಮಗಾರಿಗಳನ್ನು ಯಾವ ಹಂತದಲ್ಲಿವೆ; (ವಿವರಗಳನ್ನು ಒದಗಿಸುವುದು).

ಆ) 2013–14ರ ಅಯವ್ಯಯದಲ್ಲಿ ಘೋಷಣೆ ಮಾಡಿದಂತೆ ಪೂರಿಗಾಲಿ ಮತ್ತು ಹೇಮಾವತಿ ಅಚ್ಚುಕಟ್ಟು ಪ್ರದೇಶದಲ್ಲಿ ತುಂತುರು / ಹನಿ ನೀರಾವರಿ ಪದ್ಧತಿಯನ್ನು ಜಾರಿಗೆ ತರಲು ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ; ಇದಕ್ಕೆ ಖರ್ಚು ಮಾಡಿರುವ ಹಣ ಎಷ್ಟು; ರಾಮಸ್ವಾಮಿ ವಿರಿಜಾ, ಬಂಗಾರದೊಡ್ಡಿ, ದೇವರಾಯ ನಾಲೆಗಳನ್ನು ಆಧುನೀಕರಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ಇದಕ್ಕೆ ಒದಗಿಸಿರುವ ಅನುದಾನ ಎಷ್ಟು; ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯದ ಅಡಿಯಲ್ಲಿ ಬರುವ ವಿಶ್ವೇಶ್ವರಯ್ಯ ನಾಲಾ ಜಾಲದ 2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾರ್ಯವನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು, ಸರ್ವೆ ಕಾರ್ಯ

ಪ್ರಗತಿಯಲ್ಲಿದೆ. ಈ ಯೋಜನೆಗೆ 2014–15ನೇ ಸಾಲಿಗೆ ₹ 5000.00 ಲಕ್ಷ ಅನುದಾನ ಒದಗಿಸಲಾಗಿದೆ.

ಹೇಮಾವತಿ ಬಲದಂಡೆ ನಾಲೆ ಆಧುನೀಕರಣ ಕಾಮಗಾರಿಯ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿಯನ್ನು ವಹಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಸದರಿ ಕಾಮಗಾರಿಗೆ 2014–15ನೇ ಸಾಲಿಗೆ ₹ 1942.00 ಲಕ್ಷ ಅನುದಾನ ಒದಗಿಸಲಾಗಿದೆ.

ಹೇಮಾವತಿ ಬಲ ಮೇಲ್ದಂಡೆ ನಾಲೆ ಆಧುನೀಕರಣ ಕಾಮಗಾರಿಯ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿಯನ್ನು ವಹಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಸದರಿ ಕಾಮಗಾರಿಗೆ 2014–15 ನೇ ಸಾಲಿಗೆ ₹ 400.00 ಲಕ್ಷ ಅನುದಾನ ಒದಗಿಸಲಾಗಿದೆ.

ಬಂಗಾರದೊಡ್ಡಿ ನಾಲಾ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ. ಈ ಯೋಜನೆಗೆ 2014–15ನೇ ಸಾಲಿಗೆ ₹ 120.00 ಲಕ್ಷ ಅನುದಾನ ಒದಗಿಸಲಾಗಿದೆ.

ಆ) **ಪೂರಿಗಾಲಿ ತುಂತುರು/ ಹನಿ ನೀರಾವರಿ**

2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿರುವ ಪೂರಿಗಾಲಿ ಅಚ್ಚುಕಟ್ಟು ಪ್ರದೇಶದಲ್ಲಿ ಸೂಕ್ಷ್ಮ ಪದ್ಧತಿ ನೀರಾವರಿ ಒದಗಿಸುವ ಕಾಮಗಾರಿಯ ₹ 653.00 ಕೋಟಿ ಮೊತ್ತದ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮದಿಂದ ತಯಾರಿಸಿದ್ದು, ದಿನಾಂಕ:03–03–2015 ರಂದು ನಡೆದ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 13ನೇ ಸಭೆಯಲ್ಲಿ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಿ ಯೋಜನಾ ವರದಿಯನ್ನು ಮಾರ್ಪಡಿಸಲಾಗುತ್ತಿದೆ.

ಹೇಮಾವತಿ ಯೋಜನೆಯಲ್ಲಿ ತುಂತುರು/ ಹನಿ ನೀರಾವರಿ

ಹೇಮಾವತಿ ಯೋಜನೆಯ ನಾಗಮಂಗಲ ಶಾಖಾ ನಾಲೆಯ ವಿರತಣಾ ನಾಲೆ–9 & 10 ರಡಿಯಲ್ಲಿ Micro Irrigation ಪದ್ದತಿಯನ್ವಯ ಅಳವಡಿಸಲು ಪ್ರಸ್ತಾಪಿಸಿದೆ.

1. ನಾಗಮಂಗಲ ಶಾಖಾ ನಾಲೆಯ ವಿತರಣಾ ನಾಲೆ–9ರಲ್ಲಿ ಬರುವ ಆರ್–3 ಮತ್ತು ಆರ್–4 ಉಪ ವಿತರಣಾ ನಾಲೆಗಳ ಮೂಲಕ ಸುಮಾರು 4541.70 ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸುವ ಯೋಜನಾ ವರದಿಯನ್ನು 2013–14ನೇ ಸಾಲಿನ ದರ ಸೂಚಿ ಅನ್ವಯ ₹ 211.00 ಕೋಟಿ ಮೊತ್ತಕ್ಕೆ ಕಾವೇರಿ ನೀರಾವರಿ ನಿಗಮದಿಂದ ತಯಾರಿಸಿದ್ದು, ದಿನಾಂಕ:22–12–2014 ರಂದು ನಡೆದ ನಿಗಮದ ಅಂದಾಜು ಪರಿಶೀಲನಾ ಸಮಿತಿಯಲ್ಲಿ ಸೂಚಿಸಿದಂತೆ ಹಾಗೂ 2014–15ನೇ ಸಾಲಿನ ದರ ಪಟ್ಟಿಯಂತೆ ಅಂದಾಜನ್ನು ಮಾರ್ಪಡಿಸಲಾಗುತ್ತಿದೆ.
2. ನಾಗಮಂಗಲ ಶಾಖಾ ನಾಲೆಯ ವಿತರಣಾ ನಾಲೆ–10ರಲ್ಲಿ ಬರುವ ಬಿಳಗುಂದ ಉಪ ವಿತರಣಾ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ 309.15 ಹೆಕ್ಟೇರ್ ಪ್ರದೇಶಕ್ಕೆ ತುಂತುರು ನೀರಾವರಿ ಪದ್ದತಿ ಅಳವಡಿಸಲು DPR ಅನ್ನು ಕಾವೇರಿ ನೀರಾವರಿ ನಿಗಮದಿಂದ ತಯಾರಿಸಲಾಗುತ್ತಿದೆ.

ನದಿಪಾತ್ರದಲ್ಲಿ ಬರುವ ಅಣೆಕಟ್ಟು ನಾಲೆಗಳ ಆಧುನೀಕರಣ ಕಾಮಗಾರಿಗಳ ವಿವರಗಳು ಕೆಳಕಂಡಂತೆ ಇರುತ್ತವೆ:

ರಾಮಸ್ವಾಮಿ ಅಣೆಕಟ್ಟು ನಾಲೆ ಆಧುನೀಕರಣ

ಈ ಯೋಜನೆಗೆ 2014–15ನೇ ಸಾಲಿನಲ್ಲಿ ₹ 732.15 ಲಕ್ಷ ಅನುದಾನ ಒದಗಿಸಲಾಗಿದ್ದು, ಕಾಮಗಾರಿಯ ₹ 8232.95 ಲಕ್ಷ ಮೊತ್ತದ ಟೆಂಡರ್ ದಿನಾಂಕ:24–02–2015 ರಂದು ಅನುಮೋದನೆಯಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ವಿರಿಜಾ ಅಣೆಕಟ್ಟು ನಾಲಾ ಆಧುನೀಕರಣ

ಈ ಯೋಜನೆಗೆ 2014–15ನೇ ಸಾಲಿನಲ್ಲಿ ₹ 800.00 ಲಕ್ಷ ಅನುದಾನ ಒದಗಿಸಲಾಗಿದೆ. ಕಾಮಗಾರಿಯ ₹ 8070.00 ಲಕ್ಷ ಮೊತ್ತದ ಟೆಂಡರ್ ಅನುಮೋದನೆ ಹಂತದಲ್ಲಿದೆ.

ಬಂಗಾರದೊಡ್ಡಿ ಅಣೆಕಟ್ಟು ನಾಲೆ ಆಧುನೀಕರಣ

ಈ ಯೋಜನೆಗೆ 2014–15ನೇ ಸಾಲಿನಲ್ಲಿ ₹ 120.00 ಲಕ್ಷ ಅನುದಾನ ಒದಗಿಸಲಾಗಿದ್ದು, ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.

ದೇವರಾಯ ಅಣೆಕಟ್ಟು ನಾಲೆ ಆಧುನೀಕರಣ

ಈ ಯೋಜನೆಗೆ 2014–15ನೇ ಸಾಲಿನಲ್ಲಿ ₹ 700.00 ಲಕ್ಷ ಅನುದಾನ ಒದಗಿಸಲಾಗಿದ್ದು. ಸದರಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಒಟ್ಟಾರೆಯಾಗಿ ಈ ಆಧುನೀಕರಣ ಕಾಮಗಾರಿಗೆ ಇಲ್ಲಿಯವರೆಗೆ ₹ 680.26 ಲಕ್ಷಗಳು ವೆಚ್ಚವಾಗಿರುತ್ತದೆ.